ಉದಯ್ ಜಾದೂಗಾರ್ ಕಥೆಗಳು



ಕಲೆ: ಎಸ್.ವಿ. ಹೂಗಾರ್

# ಕಾಮದೇವನಿಗೆ ಒಂದು ಪತ್ರ

ಕಾಮದೇವ... ನಿನ್ನಲ್ಲಿ ಏನೆಂದು ಹೇಳಲಿ... ನೀನು ಶುಕ್ರವಾರ ನನ್ನನ್ನು ಸ್ವರ್ಗಕ್ಕೆ ಒಯ್ದು ಪರಮಾನಂದದ ಅನುಭವವನ್ನು ಕೊಟ್ಟೆ. ನನ್ನನ್ನು ಭಾವ ಪರವಶಳನ್ನಾಗಿ ಮಾಡಿ ಕೆಲಕಾಲ ಹುಚ್ಚಿಯನ್ನಾಗಿಸಿದೆ. ನನ್ನನ್ನು ನನ್ನವಳಾಗಿಸಿ ನಿಜವನ್ನು ಮರೆಯುವಂತೆ ಮಾಡಿದೆ. ಇದೆಲ್ಲಾ ಸಾಧ್ಯವಾದುದು ಅದು 'ನೀನು' ಆದ ಕಾರಣ.

ಇದೆಲ್ಲವನ್ನೂ ನಾನು 'ಅದು' ನಡೆದ ತಕ್ಷಣವೇ ನಿನಗೆ ಬರೆಯಬೇಕೆಂದಿದ್ದೆ. ಆದರೆ ಆಗ ಸಮಯ ಸಿಗದ ಕಾರಣ ನನ್ನ ಅನುಭವವನ್ನು ಈಗ ಕಂಪ್ಯೂಟರಿಗೆ ಇಳಿಸುತ್ತಿದ್ದೇನೆ.

ನನ್ನಲ್ಲಿ ನಿನಗೆ ಹೇಳಲೇಬೇಕಾದ ಕಥೆಯೊಂದಿದೆ. ಅದರ ಪೀಠಿಕೆಯನ್ನು ನಾನು ಈಗಾಗಲೇ ನಿನಗೆ ಹೇಳಿದ್ದೇನೆ.

ಕಳೆದ ಶುಕ್ರವಾರದ ನಂತರ ನಾನು ಜೀವನದ ವಿಶ್ಲೇಷಣೆಯನ್ನು ಮಾಡತೊಡಗಿದೆ. ಮರಣಾನಂತರದ ಜೀವನ, ಪ್ರಪಂಚದಲ್ಲಿ ಯಾವುದೇ ಜೀವಿಯ ಇರುವಿಕೆಗೆ ಕಾರಣಗಳೇನು ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಾ ಸುಮಾರು ಒಂದೂವರೆ ಗಂಟೆ ಒಬ್ಬಂಟಿಯಾಗಿ ಪಾರ್ಕಿನಲ್ಲಿ ಐದು ಸುತ್ತುಗಳನ್ನು ಹಾಕಿದೆ.

ನನ್ನ ಅಮ್ಮನಿಗೆ ಮಾತ್ರ ಗಂಡನಾಗಿರಬೇಕಾಗಿದ್ದ ನನ್ನ ಅಪ್ಪ ನಮ್ಮ ಮನೆಗೆ ಹತ್ತಿರದಲ್ಲೇ ವಾಸಿಸುತ್ತಿದ್ದ ಬೇರೊಬ್ಬ ಹೆಂಗಸಿನ ಬಲಿಪಶುವಾಗಿದ್ದ. ಈ ಪದಪ್ರಯೋಗ ಇಲ್ಲಿಗೆ ಸೂಕ್ತವಾದದ್ದು ಅಲ್ಲವೇನೋ? ಅವಳ ಸಂಪತ್ತು, ಲೈಂಗಿಕ ಸಂಪರ್ಕ, ಅಥವಾ ಮತ್ಯಾವ ಕಾರಣಕ್ಕಾಗಿ ಅಪ್ಪ ಅವಳಿಗೆ ಆಕರ್ಷಿತನಾಗಿದ್ದನೋ ಗೊತ್ತಿಲ್ಲ.

ನನ್ನ ಅಪ್ಪನಷ್ಟು ನನ್ನನ್ನು ಪ್ರೀತಿಸಿದವರು ಪ್ರಪಂಚದಲ್ಲೇ ಇಲ್ಲ, ಅವರಿಗೆ ನಾನೆಂದರೆ ಜೀವದ ಜೀವ. ಅವರ ಮರಣಕಾಲದಲ್ಲಿ ಕೂಡಾ ನನ್ನನ್ನೇ ಧೇನಿಸುತ್ತಿದ್ದರು. ನನ್ನ ಅಪ್ಪನ ತರಹದ ಅಪ್ಪನನ್ನು ಬೇರಾರೂ ಕನಸಿನಲ್ಲೂ ಊಹಿಸಲು ಅಸಾಧ್ಯ. ಅವರಿಗೆ ಅವರೇ ಸಾಟಿ.

ಇಷ್ಟು ಒಳ್ಳೆಯ ಅಪ್ಪನಿಗೆ ಮಗ್ಗುಲಿನ ಮುಳ್ಳಾಗಿದ್ದುದು ಆ ಹೆಂಗಸು. ಇದು ನಮ್ಮ ಊಹೆಯಾಗಿತ್ತಷ್ಟೆ. ಆದ್ದರಿಂದ ನಮ್ಮ ಮನೆ ನರಕವಾಗಿತ್ತು. ನಾವು ಮಕ್ಕಳಾಗಿದ್ದ ಕಾರಣ ಅಮ್ಮನ ಸಹಿಸಲಸಾಧ್ಯ ಸಂಕಟಕ್ಕೆ ಸರಿಯಾದ ಕಾರಣವನ್ನು ಕಂಡುಕೊಳ್ಳಲಾಗಿಲ್ಲ. ಎಲ್ಲಾ ಅರ್ಧಂಬರ್ಧ ಅರ್ಥ ಆಗೋದು.

ಒಂದು ದಿನ ಅಪ್ಪನ ಆಪ್ತ ಮಿತ್ರರೊಬ್ಬರು ಅವರಿಗೆ ಮನಮುಟ್ಟುವಂತೆ ತಿಳಿಹೇಳಿ ಇನ್ನೆಂದೂ ಆ ಹೆಂಗಸಿನ ಮುಖವನ್ನೂ ನೋಡದಂತೆ ಸಲಹೆ ಇತ್ತರು. ಇದನ್ನು ಒಪ್ಪಿದ ಅಪ್ಪ, ಅಮ್ಮನಿಗೆ ಭಾಷೆಯನ್ನೂ ಕೊಟ್ಟ. ನಮ್ಮ ಬಾಳಿನ ಒಳ್ಳೆ ದಿನಗಳು ಆರಂಭವಾದವು. ನಮ್ಮ ಮನೆಯ ಬಗ್ಗೆ ಯಾರೂ ಬೆಟ್ಟು ತೋರಿಸಿ ಮಾತಾಡುವಂತಿರಲಿಲ್ಲ, ಆನಂದ ಸಾಗರವೇ ಆಗಿತ್ತದು.

ಬಹುಶಃ ಇಂತಹ ಸುಂದರ ಸಂಸಾರವನ್ನು ನೋಡಿ ದೇವರೂ ಅಸೂಯೆಗೊಂಡನೋ ಏನೋ? ಅಪ್ಪನಿಗೆ ತೀವ್ರವಾದ ಹೃದ್ರೋಗ ಶುರುವಾಯಿತು. ಆತನನ್ನು ಆಸ್ಪತ್ರೆಗೆ ಸೇರಿಸಿದೆವು. ಅಪ್ಪನನ್ನು ಉಳಿಸಲು ಬೇಕಾದಷ್ಟು ಹಣ ನಮ್ಮಲ್ಲಿರಲಿಲ್ಲ. ನಾವೆಲ್ಲ ಹಣವನ್ನು ಹೊಂದಿಸಲು ಒದ್ದಾಡುತ್ತಿರುವಾಗ ಅಲ್ಲಿ 'ಆ ಹೆಂಗಸು' ವಕ್ಕರಿಸಿಕೊಂಡಳು. ಇದರಿಂದ ಅಪ್ಪ ಆಕೆಯ ಜತೆ ಇನ್ನೂ ಸಂಪರ್ಕದಲ್ಲಿದ್ದುದನ್ನು ಅಮ್ಮ ಮನದಟ್ಟು ಮಾಡಿಕೊಂಡಳು. ಇಷ್ಟು ಹೊತ್ತಿಗೆ ನಾವೂ ಪ್ರಬುದ್ಧರಾಗಿ ಸರಿತಪ್ಪುಗಳನ್ನು ವಿಮರ್ಶಿಸುವಷ್ಟು ತಿಳಿವಳಿಕೆಯುಳ್ಳವರಾದ ಕಾರಣ ಮೊದಲು ನಮ್ಮ ಮನೆಯಲ್ಲಿ ಏನೇನು ನಡೆದಿತ್ತು, ಅಮ್ಮ ಏನೇನೆಲ್ಲಾ ಅನುಭವಿಸಿದ್ದಳು ಎಂಬುದಕ್ಕೆ ಸ್ಪಷ್ಟ ಉತ್ತರ ಸಿಕ್ಕಿತು.